ಕೇಸ್ಗಳನ್ನು ಹಾಕಿದ್ದಾರೆಂದು ನನಗೆ ವರದಿ ಬಂದಿದೆ. ದಯವಿಟ್ಟು ಗೃಹಸಚಿವರು ಖುದ್ದು ಇದನ್ನು ಪರಿಶೀಲನೆ ಮಾಡಿ ಎಲ್ಲೆಲ್ಲಿ ಈ ತರಹ ಅಮಾಯಕರ ವಿರುದ್ಧ ಕೇಸ್ ಹಾಕಿ ಕೋರ್ಟಿಗೆ ಎಳೆಯುತ್ತಿರುವುದನ್ನು ತಪ್ಪಿಸಲು ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಧರ್ಮಸಿಂಗ್ : ಪರಿಶೀಲನೆ ಮಾಡುತ್ತೇನೆ. ಇದನ್ನು ಕೂಡ ಸಂಪುಟ ಸಭೆಯಲ್ಲಿ ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ಪೋಲೀಸ್ ಇಲಾಖೆಯ ಸಿಬ್ಬಂದಿ ಬಗ್ಗೆ.

1366 – ಪಿ.ಜಿ.ಆರ್. ಸಿಂಧ್ಯ (ಕನಕಪುರ), ಮಾನ್ಯ ಗೃಹಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪೇದೆಗಳ ಮತ್ತು ಮುಖ್ಯ ಪೇದೆಗಳ ಸಂಖ್ಯೆ ಎಷ್ಟು?

ಆ) ಇವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು?

ಇ) ಮಹಿಳಾ ಪೇದೆಗಳು ಎಷ್ಟು ಜನ ಇದ್ದಾರೆ.

ಈ) ಮಹಿಳಾ ಪೇದೆಗಳ ಸಂಖ್ಯೆಯನ್ನು ಹೆಚ್ಚು ಮಾಡುವ ಉದ್ದೇಶ ಸರ್ಕಾರದ ಮುಂದೆ ಇದೆಯೇ?

ಶ್ರೀ ಧರ್ಮಸಿಂಗ್, (ಗೃಹ ಸಚಿವರು)

ಅ) ಸಶಸ್ತ್ರ ಪಡೆಯು ಸೇರಿದಂತೆ ಪ್ರಸ್ತುತ ಕೆಲಸ ಮಾಡುತ್ತಿರುವ ಪೋಲೀಸ್ ಪೇದೆಗಳು 32,746 ಮತ್ತು ಮುಖ್ಯ ಪೇದೆಗಳು 9,744

ವಿವರ ಕೆಳಕಂಡಂತೆ ಇದೆ :

1.	ಸಿವಿಲ್ ಮುಖ್ಯ ಪೇದೆಗಳು	6,963
2.	ಸಿವಿಲ್ ಪೋಲೀಸ್ ಪೇದೆಗಳು	21,094
3.	ಸೆಶಸ್ತ್ರ ಮುಖ್ಯ ಪೇದೆಗಳು	2,782
4.	ಸಶಸ್ತ್ರ ಪೊ. ಪೇದೆಗಳು	11,652

ಆ) ಇವರಲ್ಲಿ 6,908 ಪರಿಶಿಷ್ಟ ಜಾತಿಗೂ 531 ಪರಿಶಿಷ್ಟ ವರ್ಗಕ್ಕೂ ಸೇರಿದವರಾಗಿದ್ದಾರೆ.

ವಿವರ ಕೆಳಕಂಡಂತೆ ಇದೆ.

	ಪ.ಜಾ	ಪ.ವರ್ಗ
ಸಿವಿಲ್ ಮುಖ್ಯ ಪೇದೆ	800	86
ಸಿವಿಲ್ ಪೋಲೀಸ್ ಪೇದೆ	3512	353
ಸಶಸ್ತ್ರ ಮುಖ್ಯ ಪೇದೆ	403	23
ಸಶಸ್ತ್ರ ಪೊ.ಪೇದೆ	2233	169

ಇ) ಪ್ರಸ್ತುತ 50 ಮಹಿಳಾ ಮುಖ್ಯ ಪೇದೆಗಳು ಮತ್ತು 251 ಮಹಿಳಾ ಪೋಲೀಸ್ ಪೇದೆಗಳು ಇದ್ದಾರೆ.

ಈ) ಹೌದು

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಪೋಲೀಸ್ ಇಲಾಖೆಯಲ್ಲಿನ ಮಹಿಳಾ ಪೋಲೀಸರ ಸಂಖ್ಯೆ ಬಹಳ ಕಡಿಮೆ ಇದ್ದು, ರಾಜ್ಯದಲ್ಲಿ ವಿಶೇಷವಾಗಿ ಕೋಮುಗಲಭೆಗಳು, ದರೋಡೆಗಳು ಹೆಚ್ಚುತ್ತಿರುವುದರಿಂದಾಗಿ ಆದಷ್ಟು ಬೇಗ ಇವರ ಸಂಖ್ಯೆ ಹೆಚ್ಚು

ಮಾಡುವ ಅವಶ್ಯಕತೆ ಇದೆ. ನಾನು ಎರಡು ಉಪಪ್ರಶ್ನೆಗಳನ್ನು ಕೇಳಲು ಬಯಸುತ್ತೇನೆ. ಈಗ 40 ಸಾವಿರ ಪೋಲೀಸರ ಸಂಖ್ಯೆ ಏನಿದೆ ಅದನ್ನು ಜಾಸ್ತಿ ಮಾಡಲು ಆದಷ್ಟು ಕ್ರಮ ಕೈಗೊಳ್ಳಬೇಕು, ಇದನ್ನು ಯಾವಾಗ ಮಾಡುತ್ತೀರೆಂದು ಹೇಳಬೇಕು. ಎರಡನೆಯದು ಬಹಳ ಮುಖ್ಯವಾದದ್ದು ಕೇವಲ 300ಮಂದಿ ಮಹಿಳಾ ಪೋಲೀಸರು ನಮ್ಮಲ್ಲಿ ಇದ್ದಾರೆ. ಅವನ್ನು 3000 ಆದರೂ ಮಾಡಬೇಕು. ಈಗ 30 ಪರ್ಸೆಂಟ್ ಮಹಿಳೆಯರಿಗೆ ರಿಸರ್ವೇಷನ್ ಮಾಡುತ್ತೇವೆಂದು ಹೇಳಿಕೊಂಡಿದ್ದೀರಿ; ಅದರ ರೀತ್ಯಾ 40 ಸಾವಿರದಲ್ಲಿ 10 ಸಾವಿರವಾದರೂ ಮಹಿಳಾ ಪೋಲೀಸರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಇದನ್ನು ಯಾವಾಗ ಪರಿಶೀಲನೆ ಮಾಡುತ್ತೀರೆಂದು ಹೇಳಬೇಕು.

ಶ್ರೀ ಧರ್ಮಸಿಂಗ್ (ಮಾನ್ಯ ಗೃಹಸಚಿವರು) : ಮಾನ್ಯ ಅಧ್ಯಕ್ಷರೇ, ಇದು ಪರಿಶೀಲನೆಯಲ್ಲಿದೆ ಎನ್ನತಕ್ಕಂಥದ್ದಲ್ಲ. ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದೇವೆ. 5th National Police Comission ರಿಪೋರ್ಟ್ ಏನು ಇದೆ, ಅದರ ಪ್ರಕಾರ over a period of 5 yearsನಲ್ಲಿ ಮಾಡಬೇಕು ಎನ್ನತಕ್ಕಂಥದ್ದನ್ನು ಅವರು ಗುರುತು ಮಾಡಿದ್ದಾರೆ, ಅದರ ಬಗ್ಗೆ ಕ್ರಮ ತೆಗೆದುಕೊಂಡು 91-92ರಲ್ಲಿ ಒಂದು ಸಾವಿರ ಕಾನ್ಷೇಬಲ್ಗಳನ್ನು ಭರ್ತಿ ಮಾಡತಕ್ಕಂಥ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತಿದ್ದೇವೆ, ಈ ವರ್ಷ ಇದನ್ನು ಮಾಡುತ್ತಿದ್ದೇವೆ. ಅದಕ್ಕೆ ಈಗಾಗಲೇ ಕ್ಯಾಬಿನೆಟ್ನಲ್ಲಿ ಕೂಡಾ ಮನ್ನಣೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ಕೂಡಾ 252 ಪೋಲೀಸ್ ವಿಮೆನ್ಸ್ ಕಾನ್ಷೇಬಲ್ಗಳು ರಾಜ್ಯದಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ, ಅದು ಬಹಳ ಕಡಿಮೆ. ಈಗಾಗಲೇ ನಾವು ಡಿಸಿಷನ್ತೆಗೆದುಕೊಂಡಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡಾ ವಿಮೆನ್ಸ್ನ ಒಂದು ಗ್ರಿವೆನ್ಸೆಸ್ ಸೆಲ್ ಕೂಡಾ ಪ್ರಾರಂಭ ಮಾಡಬೇಕು ಎನ್ನುವ ನಿರ್ಣಯವನ್ನು ತೆಗೆದೊಕೊಂಡಿದ್ದೇವೆ. ಡೌರಿ ಡೆತ್ ಅನ್ನು ಪರಿಣಾಮಕಾರಿಯಾಗಿ ತನಿಖೆಯನ್ನು ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂಬ ಕಾರಣದಿಂದ, ಒಂದು ಸಾವಿರ ಕಾನ್ಷೇಬಲ್ಗಳನ್ನು ಭರ್ತಿ ಮಾಡುವಂಥ ಸಂದರ್ಭದಲ್ಲಿ ವಿಶೇಷವಾಗಿ ಮಹಿಳಾ ಕಾನ್ಷೇಬಲ್ಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ನಾವು we have already given instructions; ಈ ಕೆಲಸ ಮಾಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನಾದರೂ ಕೇಳಲಿಕ್ಕೆ ಬಯಸತಕ್ಕಂಥದ್ದು ಈ ವಿಮೆನ್ಸ್ ಕಾನ್ಸ್ಟೇಬಲ್ಗಳ ಸಂಖ್ಯೆ ಬಹಳ ಕಡಿಮೆ ಇದೆ. ಒಂದು ಸಾವಿರ ಜನರನ್ನು ಅಪಾಯಿಂಟ್ಮೆಂಟ್ ಮಾಡುತ್ತಿರುವಂತಾದ್ದು ಸ್ವಾಗತಾರ್ಹ. ಒಂದು ಸಾವಿರ ಜನರಲ್ಲಿ ಹೆಣ್ಣು ಮಕ್ಕಳಿಗೆ 80 ಪರ್ಸೆಂಟ್ ಎಂದು ಹೇಳಿದರೆ 300 ಜನ ಮಹಿಳಾ ಪೋಲೀಸರನ್ನು ರೆಕ್ರೂಟ್ ಮಾಡಬಹುದು. ಆಗ ಇವರ ಸಂಖ್ಯೆ 600 ಆಗುತ್ತದೆ. ಆದ್ದರಿಂದ ವಿಮೆನ್ಸ್ ಕಾನ್ಸ್ಟೇಬಲ್ಗಳನ್ನು ರೆಕ್ರೂಟ್ಮೆಂಟ್ ಮಾಡಿಕೊಳ್ಳಲಿಕ್ಕೆ ವಿಶೇಷ ವ್ಯವಸ್ಥೆ ಏತಕ್ಕೆ ಮಾಡಬಾರದು; ಈಗ ಉದಾಗೆ ಎಸ್.ಸಿ. ಮತ್ತು ಎಸ್.ಟಿ. ಹುದ್ದೆಗಳನ್ನು ಭರ್ತಿ ಮಾಡಲು ನಾವು ಸ್ಪೆಷಲ್ ರೆಕ್ರೂಟ್ಮೆಂಟನ್ನು ಹಲವಾರು ಇಲಾಖೆಗಳಲ್ಲಿ ಮಾಡಿದ್ದಾರೆ. ಅದೇ ರೀತಿ ಮಹಿಳಾ ಪೋಲೀಸರನ್ನು ರೆಕ್ರೂಟ್ ಮಾಡುವುದಕ್ಕೆ ಏತಕ್ಕೆ ಸ್ಪೆಷಲ್ ರೆಕ್ರೂಟ್ಮೆಂಟ್ ಮಾಡುವುದರ ಬಗ್ಗೆ ತಾವು ಕನ್ಸಿಡರ್ ಮಾಡಬಾರದು ?

ಶ್ರೀ ಧರ್ಮಸಿಂಗ್ : ಈಗಾಗಲೇ ನಾನು ಹೇಳಿದ ಹಾಗ ಪೋಲೀಸ್ ಕಮೀಷನ್ ರಿಪೋರ್ಟ್ ಏನು ಇದೆ, ಅದರಲ್ಲಿ ಈಗ 700 ವಿಮೆನ್ಸ್ ಕಾನ್ಸ್ಟೇಬಲ್ಸ್ 250 ವಿಮೆನ್ಸ್ ಹೆಡ್ ಕಾನ್ಸ್ಟೇಬಲ್ಸ್ 80 ಸಬ್ ಇನ್ಸ್ಪೆಕ್ಟರ್ಸ್, 46 ಇನ್ಸ್ಪೆಕ್ಟರ್ಗಳನ್ನು ನೇಮಕ ಮಾಡಬೇಕು ನಿಗದಿ ಮಾಡಿದ್ದಾರೆ. ಈಗ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ ಎಂದರೆ 47 ಸಾವಿರ ಜನರು ಪೋಲೀಸ್ ಕಾನ್ಸ್ಟೇಬಲ್ ಏನು ಕೆಲಸವನ್ನು ರಾಜ್ಯದಲ್ಲಿ ಮೂವತ್ತು ವರ್ಷಗಳಿಂದ ಮಾಡುತ್ತಿದ್ದಾರೆ. ಇವರಲ್ಲಿ ಕೇವಲ 252 ವಿಮೆನ್ಸ್ ಕಾನ್ಷೇಬಲ್ಗಳು

ಇದ್ದು, ಅವರು ಕೆಲಸವನ್ನು ಮಾಡುತ್ತಿದ್ದಾರೆ. ಈಗ ನಾವು ಇವರನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆಗೆದುಕೊಳ್ಳಲು ಕ್ರಮ ತೆಗೆದುಕೊಂಡಿದ್ದೇವೆ. ಅದಕ್ಕಾಗಿ ಈ ವರ್ಷ ಪ್ರಾರಂಭ ಮಾಡಿದ್ದೇವೆ. ಏಕೆಂದರೆ ಇದು ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಇದ್ದರೂ ಕೂಡಾ ಈ ಹೆಚ್ಚಿಗೆ 28 ಕೋಟಿ ರೂಪಾಯಿ 91-91ರಲ್ಲಿ ಖರ್ಚು ಮಾಡಬೇಕು ಎನ್ನತಕ್ಕಂಥ ರೀತಿಯಲ್ಲಿ ನಮಗೆ ಹೇಳಿದ್ದಾರೆ. ಈ ಕಾರ್ಯಕ್ರಮವನ್ನು ಬಹಳ ತೀವ್ರಗತಿಯಿಂದ ಪ್ರಾರಂಭ ಮಾಡುತ್ತಿದ್ದೇವೆ. ಈ ವರ್ಷ ಒಂದು ಸಾವಿರ ಕಾನ್‌ಸ್ಟೇಬಲ್‌ಗಳನ್ನು ತೆಗೆದುಕೊಳ್ಳತಕ್ಕಂಥದ್ದರಲ್ಲಿ ಮೂವತ್ತು ಪರ್ಸೆಂಟ್ ಏನು ಇದೆ, ಅದರ ಬಗ್ಗೆ ಅದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟು ವರ್ಷೇ ವರ್ಷೇ ಹೆಚ್ಚು ಮಾಡುತ್ತಾ ಹೋಗುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಒಂದು ಸಾವಿರ ಜನ ಕಾನ್‌ಸ್ಟೇಬಲ್‌ಗಳನ್ನು ಅಪಾಯಿಂಟ್ ಮಾಡಿಕೊಳ್ಳುತ್ತೇವೆ ಎಂದು ತಿಳಿಸಿದ್ದೀರಿ. ಹೋಂ ಗಾರ್ಡ್‌ಗಳು ಈ ಸ್ಟೇಟ್‌ನಲ್ಲಿ ಸಾವಿರಾರು ಜನ ಬಹಳ ಉಪಯುಕ್ತವಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಒಂದು ದಿವಸ ಕೆಲಸವನ್ನು ಮಾಡಿದರೆ 15 ರೂಪಾಯಿ ಕೊಡುತ್ತಾರೆ. ಅವರು ಮನೆಗೆ ಹೊರಟು ಹೋಗುತ್ತಾರೆ. ಅವರ ವಿದ್ಯಾರ್ಹತೆಯ ಮೇಲೆ ಮತ್ತು ಅವರನ್ನು ರೋಸ್ಟರ್ ಸಿಸ್ಟಂನ್ನು ಅನುಸರಿಸಿ ಒಂದು ಐದು ಪರ್ಸೆಂಟೋ ಅಥವಾ ಆರು ಪರ್ಸೆಂಟೋ ನೋಡಿ ಅವರಿಗೂ ಕೂಡಾ ಹೋಂಗಾರ್ಡ್ಸ್ ಆಗಿ ಯಾರು ಕೆಲಸ ಮಾಡುತ್ತಿದ್ದಾರಲ್ಲಾ, ಅವರಿಗೆ ಪೋಲೀಸರನ್ನು ಅಪಾಯಿಂಟ್ ಮಾಡುವಾಗ ಅವರ ಅಪ್ಲಿಕೇಷನ್‌ಗನ್ನು ಕೂಡಾ ಕನ್ಸಿಡರ್ ಮಾಡಿ ಐದು ಪರ್ಸೆಂಟ್ ರಿಸರ್ವೇಷನ್ ಇರುವಂಥ ಉದ್ದೇಶವೇನಾದರೂ ಸರ್ಕಾರಕ್ಕೆ ಇದೆಯೇ?

ಶ್ರೀ ಧರ್ಮಸಿಂಗ್ : ಮಾನ್ಯ ಹನುಮೇಗೌಡರು ಹೇಳಿರುವಂಥ ವಿಷಯವನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದರು, ಈಗಾಗಲೇ ಮೂರು ನೂರು ಮಹಿಳಾ ಕಾನ್ಸ್‌ಟೇಬಲ್ಲಳು ಇದ್ದಾರೆ, ಒಂದು ಸಾವಿರ ರೆಕ್ರೂಟ್‌ಮೆಂಟ್ ಮಾಡುವಾಗ 300 ಜನರನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದರೆ ಇವತ್ತು ಏನಾಗುತ್ತದೆ ಎಂದರೆ, ಕಳೆದ ಹತ್ತು - ಹನ್ನೆರಡು ವರ್ಷದಲ್ಲಿ ಹೆಣ್ಣುಮಕ್ಕಳು ಪೋಲೀಸ್ ಸ್ಟೇಷನ್‌ಗೆ ಬರುವುದು ಹೆಚ್ಚಾಗಿದೆ. ಅತ್ಯಾಚಾರದ ಪ್ರಕರಣಗಳು ಮತ್ತು ಬೇರೆ ಬೇರೆ ಪ್ರಕರಣಗಳಿಂದ ಅವರು ಬರುತ್ತಾರೆ. ಆದರೆ ಜಿಲ್ಲಾ ಮಟ್ಟದಲ್ಲಿ ಬಿಟ್ಟು ತಾಲ್ಲೂಕುಮಟ್ಟದಲ್ಲಿ ಸಬ್ ಡಿವಿಜನ್ ಮಟ್ಟದಲ್ಲಿ ಯಾರೂ ಲೇಡೀಸ್ ಕಾನ್‌ಸ್ಟೇಬಲ್‌ಗಳು ಇರುವುದಿಲ್ಲ. ಆದ್ದರಿಂದ ಪ್ರತಿಯೊಂದು ಪೋಲೀಸ್ ಸ್ಟೇಷನ್ನಿನಲ್ಲಿ ಅಟ್ಲೀಸ್ಟ್ ಒಂದು ಅಥವಾ ಎರಡೋ ಇವತ್ತು ಲೇಡೀಸ್ ಪೋಲೀಸ್ ಕಾನ್ಸ್‌ಟೇಬಲ್ಲಳು ಇರುವುದು ಅವಶ್ಯಕತೆ ಇದೆ. ಇದರ ಬಗ್ಗೆ ಆ ದೃಷ್ಟಿಯಿಂದ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಈಗಾಗಲೇ ನಾವು ಪ್ರತಿ ಜಿಲ್ಲಾ ಮಟ್ಟದಲ್ಲೂ ಕೂಡಾ ಮಹಿಳಾ ದೂರು ವಿಭಾಗ ತೆರೆಯಬೇಕು ಎನ್ನತಕ್ಕಂಥ ನಿರ್ಣಯವನ್ನು ತೆಗೆದುಕೊಂಡು ಪ್ರತಿ ಜಿಲ್ಲೆಯಲ್ಲಿಯೂ ಕೂಡ ಒಬ್ಬ ಇನ್ಸ್‌ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್, ಕೆಲವು ಕಾನ್ಸ್‌ಟೇಬಲ್‌ಗಳನ್ನು ತುಂಬಬೇಕು ಎಂದು ಇದ್ದೇವೆ. ಮತ್ತು ತಾಲ್ಲೂಕು ಮಟ್ಟದಲ್ಲಿ ಮುಂದೆ ಮಾಡುತ್ತೇವೆ. ಜಿಲ್ಲಾ ಮಟ್ಟದಲ್ಲಿ ಇವರನ್ನು ತೆಗೆದುಕೊಳ್ಳತಕ್ಕಂಥ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಪೋಲೀಸ್ ಇಲಾಖೆಯಲ್ಲಿ ಹೆಚ್ಚುವರಿ ಸಿಬ್ಬಂದಿ ಮಾಡಲು ಒಂದು ಹೊಸ ಯೋಜನೆಯನ್ನು ಕೈಗೊಂಡಿದ್ದೇವೆಂದು ತಾವು ಹೇಳಿದ್ದೀರಿ.

ಅದರಲ್ಲಿ ಪೋಲೀಸ್ ಪೇದೆಗಳಿಗೆ ಬರೀ ಅವರ ಸಂಖ್ಯೆಯನ್ನು ಜಾಸ್ತಿ ಮಾಡುವುದರ ಜೊತೆಗೆ ಅವರಲ್ಲಿ ಒಂದು ಬೇಡಿಕೆ ಇದೆ. ಭತ್ಯ ವಗೈರೆ ಹಾಗೂ ಇನ್ನೂ ಅನೇಕ ವಿಚಾರಗಳಲ್ಲಿ ಅವರ ಬೇಡಿಕೆ ಇದೆ. ಏಕೆಂದರೆ ಕಾರ್ಮಿಕರು ಚಳುವಳಿ ಮಾಡಿದಾಗ, ಬೇರೆ ಬೇರೆಯವರು ಸತ್ಯಾಗ್ರಹ ಮಾಡಿದಾಗ ಇವರು ದಿನದ 24 ಗಂಟೆಗಳೂ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಯಾವುದೋ ಕಾಲದ ಏಳು ರೂಪಾಯಿ ಭತ್ಯವನ್ನು ಈಗ ಏನು ಕೊಡುತ್ತಿದ್ದೀರಿ, ಅದನ್ನು ಈಗ 35 ರೂಪಾಯಿಗಳಿಗೆ ಹೆಚ್ಚಿಸುವುದಕ್ಕೆ ಹೊಸ ಯೋಜನೆಯನ್ನು ಏನಾದರೂ ಮಾಡಿದ್ದೀರಾ? ಅದನ್ನು ಮಾಡುವುದರಿಂದ ಒಳ್ಳೆಯದಲ್ಲವೇ ಎನ್ನುವುದು ಒಂದು. ಎರಡನೆಯದಾಗಿ ಈ ಹೆಚ್ಚುವರಿ ಪೋಲೀಸರನ್ನು ನೇಮಕ ಮಾಡುವಾಗ ಗಡಿ ಪ್ರದೇಶಗಳಾದ ಚಾಮರಾಜನಗರ, ಹೆಗ್ಗಡದೇವನ ಕೋಟೆ, ಗುಂಡ್ಲುಪೇಟೆ ಈ ಅರಣ್ಯ ಪ್ರದೇಶಗಳಲ್ಲಿ ವೀರಪ್ಪನ ಗದ್ದಲಗಳು ನಡೆಯುತ್ತಿದೆ; ಅಲ್ಲಿ ವಿಶೇಷವಾಗಿ ಪೋಲೀಸ್ ಠಾಣೆಯನ್ನು ಮತ್ತು ಅಗ್ನಿಶಾಮಕ ಠಾಣೆಯನ್ನು ಕೊಡತಕ್ಕ ವ್ಯವಸ್ಥೆ ತಮಗೆ ಏನಾದರೂ ಇದೆಯಾ ಅನ್ನತಕ್ಕದ್ದನ್ನು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಈಗ ಪ್ರಸ್ತುತ ಏಳು ರೂಪಾಯಿ ಭತ್ಯ ಕೊಡುತ್ತಿದ್ದುದನ್ನು ಹದಿನಾಲ್ಕು ರೂಪಾಯಿ ಮಾಡಿದ್ದೇವೆ. ಈಗ 22-00 ರೂಪಾಯಿ ಕೂಡ ಮಾಡಿದ್ದೇವೆ. ಫೀಡಿಂಗ್ ಚಾರ್ಜಸ್ ಕೂಡ ಪ್ರತಿದಿವಸಕ್ಕೆ 7 ರೂಪಾಯಿ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಅವರ ತೊಂದರೆಯನ್ನು ನಿವಾರಣೆ ಮಾಡಿದ್ದೇವೆ. ಈಗ ಬಾರ್ಡರ್ ಏರಿಯಾದಲ್ಲಿ ಹಾಗೂ ಹೆಚ್ಚಿನ ಗಲಾಟೆಯಾಗುವ ಪ್ರದೇಶದಲ್ಲಿ ಹೆಚ್ಚು ಗಮನ ಕೊಡತಕ್ಕ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಅದಕ್ಕಾಗಿ 1990-91ರಲ್ಲಿ 15ರಿಂದ 20ನ್ನು ಪೋಲೀಸ್ಠಾಣೆಗಳ ಹೊಸದಾಗಿ ಪ್ರಾರಂಭ ಮಾಡಬೇಕೆಂದಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಚಾಮರಾಜನಗರ, ಕೊಳ್ಳೆಗಾಲದಲ್ಲಿ ಮಾಡುತ್ತೀರಾ?

ಶ್ರೀ ಧರ್ಮಸಿಂಗ್ : ಎಲ್ಲಿ ಗಲಾಟೆ ಆಗುವಂತಹ ಏರಿಯಾ ಇದೆ ಅಂತಹ ಕಡೆ ಮಾಡುತ್ತೇವೆ. ಶ್ರೀ ಎನ್.ಜಿ.ನಾಯಕ್ : ಮಾನ್ಯ ಸಚಿವರು ಎಲ್ಲಾ ಕಡೆಯೂ ನಾವು ಪೋಲೀಸ್ ಠಾಣೆಗಳನ್ನು ಹೆಚ್ಚು ಮಾಡುತ್ತೇವೆಂದು ಹೇಳಿದರು. ನನ್ನ ಕ್ಷೇತ್ರ ಆಂಧ್ರ ಬಾರ್ಡರ್ ಏರಿಯಾ ಅಲ್ಲಿ ಬೇಕಾದಷ್ಟು ದರೋಡೆಗಳು ಆಗಿವೆ. ಅದು ಏನಾದರೂ ತಮ್ಮ ಗಮನಕ್ಕೆ ಬಂದಿದೆಯಾ?

1983ರಿಂದ ನನ್ನ ಕ್ಷೇತ್ರಕ್ಕೆ ಪೋಲೀಸ್ ಸರ್ಕಲ್ ಇನ್ಸ್ಪೆಕ್ಟರ್ ಹುದ್ದೆ ಕೊಡಬೇಕೆಂದು ಕಳಕಳಿಯಿಂದ ಕೇಳುತ್ತಿದ್ದೇನೆ. ಈಗಲಾದರೂ ಕೊಡುವ ವ್ಯವಸ್ಥೆ ಮಾಡುತ್ತೀರಾ? ಹೇಗೋ ಹೆಚ್ಚುವರಿಯಾಗಿ ನೇಮಕ ಮಾಡುವ ಸಂದರ್ಭದಲ್ಲಿ ನನ್ನ ಕ್ಷೇತ್ರಕ್ಕೆ ಪೋಲೀಸ್ ಸರ್ಕಲ್ ಇನ್ಸ್ಪೆಕ್ಟರ್ ಒಬ್ಬರನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಿಮಗೆ ಲೇಡೀಸ್ ಪೋಲೀಸ್ - ಬೇಕು ಅಲ್ಲವೇ?

ಶ್ರೀ ಎನ್.ಜಿ. ನಾಯಕ್ : ನಮ್ಮಲ್ಲಿ ದರೋಡೆಗಳು ಜಾಸ್ತಿಯಾಗುತ್ತಿವೆ. ಅದಕ್ಕಾಗಿ ಅಲ್ಲಿಗೆ ಖಂಡಿತವಾಗಿಯೂ ಒಂದು ಪೋಲೀಸ್ ಠಾಣೆಯನ್ನು ಕೊಡಬೇಕು. ಅದೂ ಅಲ್ಲದೆ ನನ್ನ ಕ್ಷೇತ್ರದಲ್ಲಿ ನಾಯಕನ ಹಟ್ಟಿ ಎಂದು ದೊಡ್ಡ ಕ್ಷೇತ್ರ ಇದೆ. ಅಲ್ಲಿ ಲಕ್ಷಾಂತರ ಜನ ಪ್ರತಿ ವರ್ಷವೂ ಸೇರುತ್ತಾರೆ. ಆ ಕ್ಷೇತ್ರಕ್ಕೆ ಪೋಲೀಸ್ ಠಾಣೆಯನ್ನು ಕೊಡಬೇಕೆಂದು ನಾನು ಅರಿಕೆ ಮಾಡಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಕೂಡಾ ವಾಗ್ದಾನ ಮಾಡಿದ್ದಾರೆ ಅದರಂತೆ ಅದನ್ನು ಕಾರ್ಯಗತ ಮಾಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ. ಧರ್ಮಸಿಂಗ್ : ಮಾನ್ಯ ಸದಸ್ಯರು ಈಗಾಗಲೇ ಅದನ್ನು ಹೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಅಧ್ಯಕ್ಷರು : ನಾಯಕನ ಹಟ್ಟಿಯದ್ದು ಸ್ವಲ್ಪ ನೋಡಿ.

ಶ್ರೀ ಧರ್ಮಸಿಂಗ್ : ಆಯಿತು.

ಶ್ರೀ ಎನ್.ಜಿ.ನಾಯಕ್ : ನನ್ನ ಕ್ಷೇತ್ರಕ್ಕೆ ಸರ್ಕಲ್ ಇನ್ಸಪೆಕ್ಟರ್ ಬೇಕೆಂದು 1983ರಿಂದಲೂ ಕೇಳುತ್ತಿದ್ದೇನೆ. ಇದುವರೆಗೂ ನನ್ನ ಬೇಡಿಕೆ ಈಡೇರಿಲ್ಲ. ಈಗಲಾದರೂ ದಯವಿಟ್ಟು ಕೊಡಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಆರ್ ಧರ್ಮಸಿಂಗ್: ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಎನ್.ಜಿ. ನಾಯಕ್ : ಪರಿಶೀಲಿಸುತ್ತೇವೆಂದರೆ ಕೇಳುವುದಿಲ್ಲ; ನನಗೆ ಕೊಟ್ಟೇ ಕೊಡುತ್ತೇವೆಂದು ವಾಗ್ದಾನ ಮಾಡಬೇಕು; ಏಕೆಂದರೆ ಅದು ಆಂಧ್ರ ರಾಜ್ಯಕ್ಕೆ ಹೊಂದಿರುವ ಗಡಿಭಾಗವಾಗಿದೆ.

ಅಧ್ಯಕ್ಷರು : ಅವರಿಗೆ ವಾಗ್ದಾನ ಮಾಡಿ, ಇಲ್ಲದಿದ್ದರೆ ನಾನು ಅವರಿಗೆ ವಾಗ್ದಾನ ಮಾಡಬೇಕು; ಏಕೆಂದರೆ ಅದು ಆಂಧ್ರರಾಜ್ಯಕ್ಕೆ ಹೊಂದಿರುವ ಗಡಿ ಭಾಗವಾಗಿದೆ.

ಅಧ್ಯಕ್ಷರು : ಅವರಿಗೆ ವಾಗ್ದಾನ ಮಾಡಿ, ಇಲ್ಲದಿದ್ದರೆ ನಾನು ಅವರಿಗೆ ವಾಗ್ದಾಂಡನೇ ಮಾಡಬೇಕಾಗುತ್ತದೆ; ಆಗಲಿ ನಾಯಕರೆ; ಮಂತ್ರಿಗಳು ನಿಮ್ಮ ಬೇಡಿಕೆಯನ್ನು ಪರಿಶೀಲನೆ ಮಾಡುತ್ತಾರೆ;

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ : ನಮ್ಮ ಪೋಲೀಸ್ ಇಲಾಖೆಯಲ್ಲಿ ಭರ್ತಿ ಮಾಡುವ ಕಾಲಕ್ಕೆ ಎನ್.ಸಿ.ಸಿ. ಸ್ಟೂಡೆಂಟ್ಸ್ ಕೂಡ ಅದರಲ್ಲಿ ಅಳವಡಿಸಬೇಕೆಂದು ನಾನು ಈಗಾಗಲೇ ಸರ್ಕಾರದಲ್ಲಿ ಮನವಿ ಮಾಡಿಕೊಂಡಿದ್ದೇನೆ. ಎನ್.ಸಿ.ಸಿ. ಟ್ರೈನಿಂಗ್‌ಕೊಡುವುದರಿಂದ ಆ ವಿದ್ಯಾರ್ಥಿಗಳನ್ನು ಬೇರೆ ಕಡೆಗೆ ತೆಗೆದುಕೊಳ್ಳುವುದರಿಂದ ಅಷ್ಟೊಂದು ಪ್ರಯೋಜನವಾಗುವುದಿಲ್ಲ ಅಂತ ನನ್ನ ಭಾವನೆ. ಅದಕ್ಕಾಗಿ ಎನ್.ಸಿ.ಸಿ. ಸ್ಟೂಡೆಂಟ್ಸ್‌ಗೆ ಏನಾದರೂ ಶೇಕಡ 20, ಅಥವಾ ಶೇಕಡಾ 30ರಷ್ಟು ರಿಸರ್ವೇಶನ್ ಇಟ್ಟು ಸೆಲೆಕ್ಷನ್ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಗಮನಹರಿಸುತ್ತೇನೆ.

ಶ್ರೀಮತಿ ಮೋಟಮ್ಮ : ನಾನು ನಿನ್ನೆಯ ದಿವಸ ಮಾತನಾಡುತ್ತಾ ಹೇಳಿದೆ, ಈ ವರ್ಷ ಸಾರ್ಕ್ ಹೆಣ್ಣು ಮಗುವಿನ ವರ್ಷ. ಆದ್ದರಿಂದ ಹೆಚ್ಚು ಹೆಣ್ಣುಮಕ್ಕಳನ್ನು ಪೋಲೀಸ್ ಸೆಲೆಕ್ಷನ್ನಲ್ಲಿ ಆಯ್ಕೆ ಮಾಡುವುದು ಒಳ್ಳೆಯದು. ನೀವೇ ಅವರಿಗೆ ಲೇಡಿ ಪೋಲೀಸ್ ಇನ್ಸ್ಪೆಕ್ಟರ್ ಕೊಟ್ಟರೆ ಒಳ್ಳೆಯದೆಂದು ಸಜೆಸ್ಟ್ ಮಾಡಿದ್ದಾರಲ್ಲಾ; ನಿಜವಾಗಿಯೂ ಈಟ್ ಇಸ್ ಎ ಕ್ರೆಡಿಟ್ ಲೇಡಿ ಪೋಲೀಸ್ ಇನ್ಸ್ಪೆಕ್ಟರ್ರನ್ನು ಎಕ್ಸಿಕ್ಯೂಟಿವ್ ವರ್ಕ್ಗೆ ಹಾಕಿದರೆ ಒಳ್ಳೆಯದು. ಇವರನ್ನು ಸಹ ರೆಗ್ಯುರಲ್ ಪೋಲೀಸ್ ಠಾಣಗೆ ಹಾಕಿಕೊಡುತ್ತೀರಾ ಎಂದು ಕೇಳುತ್ತೇನೆ?

ಅಧ್ಯಕ್ಷರು : ಈ ಡಕಾಯಿತಿಗಳು ಜಾಸ್ತಿಯಾಗುತ್ತಿರುವ ಕಾಲದಲ್ಲಿ I think we should experiment with lady police constables hereafter.

(1374)

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಅಧ್ಯಕ್ಷರೇ, ಈ ಉತ್ತರ ಬಂದಾಗ ತಡೆಹಿಡಿಯುವುದಕ್ಕೆ ನಾನೇ ಹೇಳಿದ್ದೆ. ಚಳ್ಳಕೆರೆಯಲ್ಲಿಯೇ ಅಲ್ಲದೆ ಬೇರೆ ಕಡೆ ಕೂಡ ಈ ತರಹದ ಪ್ರಕರಣಗಳಾಗಿವೆ. ಆದ್ದರಿಂದ ಈ-- ಸದನ ಮುಗಿಯುವ ವೇಳೆಗೆ ಇದರ ಡೀಟೈಲ್ಸನ್ನು ಕೊಡುತ್ತೇನೆ. Next Friday I will give.

ಅಧ್ಯಕ್ಷರು : ಆಗಬಹುದೇ ನಾಯಕರೇ; ಇದನ್ನು ಮುಂದಿನ ಶುಕ್ರವಾರ ತೆಗೆದುಕೊಳ್ಳಲಾಗುವುದು.

ಶ್ರೀ ಎನ್.ಜಿ. ನಾಯಕ್ : ಸನ್ಮಾನ್ಯ ಅಧ್ಯಕ್ಷರೇ, ನಾನು 1374ನೇ ಪ್ರಶ್ನೆಯನ್ನು ಕೇಳುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಶ್ರೀ ಧರ್ಮಸಿಂಗ್ : ನಿಮ್ಮ ಪ್ರಶ್ನೆಗೆ ಸಮರ್ಪಕವಾದ ಉತ್ತರ ಕೊಡಲಿಕ್ಕೆ ತಡೆ ಹಿಡಿಯಲಾಗಿದೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆಗೆ ಉತ್ತರ ಕೊಡಲು ಸಮಯ ಬೇಕೆಂದು ಅವರು ಕೇಳುತ್ತಿದ್ದಾರೆ.

ಶ್ರೀ ಎನ್.ಜಿ. ನಾಯಕ್ : ಇದಕ್ಕೆ ಸಮಯ ಬೇಕಾಗಿಲ್ಲ. ಇದನ್ನು ಮಾನ್ಯ ಗೃಹ ಸಚಿವರು ಅರ್ಥಮಾಡಿಕೊಳ್ಳಬೇಕು. ನನ್ನ ಕ್ಷೇತ್ರದಲ್ಲಿ ಬರುವಂಥ ಚಳ್ಳಕೆರೆಯ ಒಂದೇ ಕಡೆಯಲ್ಲಿ ೩೦೦-೪೦೦ ಮನೆಗಳು ಸುಟುಹೋಗಿವೆ. ಅದರ ಬಗ್ಗೆ ಏನುಕ್ರಮ ತೆಗೆದುಕೊಂಡಿದ್ದಾರೆಂದು ತಳಿಸಿಸಬೇಕು.

ಅಧ್ಯಕ್ಷರು : ನಿಮ್ಮಪ್ರಶ್ನೆ ಕೇಳಿ.

ಶ್ರೀ ಎನ್.ಜಿ. ನಾಯಕ್ : ಸನ್ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆಯಲ್ಲಿ 1990-91ನೇ ಸಾಲಿನಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಮನೆಗಳು ಸುಟ್ಟು ಹೋಗಿವೆ? ಅದಕ್ಕೆ ಸರ್ಕಾರ ಏನು ಪರಿಹಾರವನ್ನು ಕೊಟ್ಟಿದೆ ಎಂದು ದಯವಿಟ್ಟು ತಿಳಿಸಬೇಕು?

ಶ್ರೀ ಧರ್ಮಸಿಂಗ್: ಸನ್ಮಾನ್ಯ ಸದಸ್ಯರಾದ ನಾಯಕ್‌ರವರು ಏನು ಪ್ರಶ್ನೆ ಕೇಳಿದ್ದಾರೆಂದರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಕಡೆ ಮನೆಗಳು ಸುಟ್ಟುಹೋಗಿವೆ ಎಂದು? ನಾನು ಉತ್ತರ ನೋಡಿದಾಗ ಮೂರು ಕಡೆ ಎಂದು ಇದೆ; ಚಳ್ಳಕೆರೆಯಲ್ಲಿ 380 ಗುಡಿಸಲುಗಳು ಸುಟ್ಟಿವೆ. ಅದರಲ್ಲಿ ಪರಿಹಾರ ಎಷ್ಟು ಕೊಟ್ಟಿದ್ದಾರೆ ಎನ್ನುವ ವರದಿ ಬಂದಿಲ್ಲ. ಸರ್ಕಾರದಿಂದ ಯಾವ ರೀತಿಯಾದಂಥ ಒಂದು ಒಳ್ಳೆಯ ಉತ್ತರವನ್ನು ನಾಯಕರು ಬಯಸುತ್ತಾರೋ ಅಂಥ ಉತ್ತರವನ್ನು ಮುಂದಿನ ಶುಕ್ರವಾರ ನಾನು ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಅಧ್ಯಕ್ಷರು : ಮುಂದಿನ ಶುಕ್ರವಾರ ಸಭೆ; ಇಲ್ಲ ನೀವಿಬ್ಬರೇ ಸೇರಿ ಸಭೆ ಮಾಡಬೇಕಾಗುತ್ತದೆ.

ಶ್ರೀ ಎನ್.ಟಿ. ನಾಯಕ್ : ಹೋದವರ್ಷ ಕೂಡ ಅದೇ ಜಾಗದಲ್ಲಿ: ಮುನ್ನೂರು ಮನೆಗಳು ಸುಟ್ಟಿವೆ. ಈ ವರ್ಷ ಕೂಡ 300 ಚಿಲ್ಲರೆ ಮನೆಗಳು ಸುಟ್ಟಿರೆ. ಇದಕ್ಕೆ ಕಾರಣವೇನು ಎಂಬುದು ನನಗೆ ಚೆನ್ನಾಗಿ ಗೊತ್ತು. ಇದಕ್ಕೆ ಪರಿಹಾರ ಕೊಡಬೇಕು; ಈ ಏರಿಯ ಒಂದು ವಿದ್ಯಾ ಸಂಸ್ಥೆಗೆ ಸೇರಿದೆ. ಆದುದರಿಂದ ಪ್ರತಿವರ್ಷ ಆ ವಿದ್ಯಾ ಸಂಸ್ಥೆಯವರೇ ಆ ಮನೆಗಳನ್ನು ಸುಟ್ಟಿರಬಹುದು ಏಂದು ನನ್ನ ಮನವರಿಕೆ. ಆದುದರಿಂದ ಇದನ್ನು ಇನ್ವೆಸ್ಟಿಗೇಟ್ ಮಾಡಿ ಸರಿಯಾದ ಆಕ್ಷನ್ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ : ಅಲ್ಲಿ ಏನು ಅನಾಹುತವಾಗಿದೆ, ಅದರ ಬಗ್ಗೆ ನೇರವಾಗಿ ಪೋಲೀಸ್ ಅಧಿಕಾರಿಗಳ ಜೊತೆ, ಸಮಾಲೋಚನೆ ಮಾಡಿ ತನಿಖೆ ಮಾಡುವುದಕ್ಕೆ ಈಗಾಗಲೇ ಆಜ್ಞೆ ಹೊರಡಿಸಿದ್ದೇವೆ ಮತ್ತು ಚಳ್ಳಕೆರೆಯ ಭಾಗದಲ್ಲಿ ಇದು ಪ್ರತಿ ವರ್ಷ ಆಗುತ್ತಿದೆ. ಆದುದರಿಂದ ಅಲ್ಲಿಗೆ ಒಂದು ಫೈರ್ವೇಷನ್ ಕೂಡಾ ಕೊಡಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ.

ಅಧ್ಯಕ್ಷರು : ಶ್ರೀಮತಿ ಸುಮಾ ವಸಂತ್‌ರವರು ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಬಹುದು.

ಶ್ರೀಮತಿ ಸುಮಾ ವಸಂತ್ : ಸೆಲೆಕ್ಷನ್ ಬಗ್ಗೆ ಕೇಳುತ್ತೇನೆ.

ಅಧ್ಯಕ್ಷರು : ಆ ಪ್ರಶ್ನೆ ಮುಗಿದಿದೆ. ನಾವೀಗ ನಾಯಕರ ಹಟ್ಟಿಗೆ ಹೋಗಿದ್ದೇವೆ. ಅಲ್ಲಿ ಫೈರ್ ವಿಕ್ಟಿಮ್ಸ್ಗೆ ಪರಿಹಾರ ಕೊಡುವ ಬಗ್ಗೆ ಕೇಳುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಈ ಬಗ್ಗೆ ಮಾನ್ಯ ಸಚಿವರು ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಇದ್ದಾರೆ. ಈ ಫೈರ್ ಅಕ್ಸಿಡೆಂಟ್‌ನಲ್ಲಿ ಮನೆಗಳು, ಗುಡಿಸಲುಗಳು ಸುಟ್ಟಂಥವರಿಗೆ ನಾವು ಏನು ಮಾಡುತ್ತಿದ್ದೇವೆಂದರೆ, ತಹಶೀಲ್ದಾರ್ ಲೆವೆಲ್‌ನಲ್ಲಿ 300 ರೂ.ಗಳನ್ನು ಕಾಂಪೆನ್ಸೇಷನ್ ಆಗಿ ಕೊಡುತ್ತಿದ್ದೇವೆ. ರೆಕಮೆಂಡ್ ಮಾಡಿ ಕಳುಹಿಸಿದರೆ 6 ತಿಂಗಳಿಗೆ, ಹೆಚ್ಚಿಗೆ ಎಂದರೆ 500 ರೂ.ಗಳು ಸಿಗುತ್ತಿದೆ. ಆದುದರಿಂದ ನಾನು ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದು 15-20 ವರ್ಷಗಳ ಹಿಂದೆ ಫಿಕ್ಸ್ಡ್ ಆಗಿರುವಂಥ ಕಾಂಪೆನ್ಸೇಷನ್. ಅದನ್ನು ಹೆಚ್ಚು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಗುಡಿಸಲು ಸುಟ್ಟವರಿಗೆ ಕನಿಷ್ಠ 1000 ರೂ.ಗಳು ಹಾಗೂ ಮನೆಗಳು ಸುಟ್ಟವರಿಗೆ ಕನಿಷ್ಠ 5000ರೂ.ಗಳನ್ನು ಕೊಡುವ ವ್ಯವಸ್ಥೆಯಾಗಬೇಕು. ಏಕೆಂದರೆ ಇವತ್ತು ಮೂರು ನೂರು ರೂ.ಗಳಿಂದ ಏನು ಆಗುವುದಿಲ್ಲ. ಆದುದರಿಂದ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ದೇಶಪಾಂಡೆಯವರ ಸಲಹೆಯನ್ನು ನಾನು ಅನುಮೋದನೆ ಮಾಡುತ್ತೇನೆ. ಏಕೆಂದರೆ ಅದು ಓಬೀರಾಯನ ಕಾಲದ ಕಾನೂನು. ಬೆಂಕಿ ಬಿದ್ದಾಗ, ತಹಶೀಲ್ದಾರರ ಹತ್ತಿರ ಫಂಡ್ಸ್ ಇದ್ದರೆ, ಮೊದಲಿಗೆ ತಾತ್ಕಾಲಿಕವಾಗಿ 300 ರೂ.ಗಳನ್ನು ಕೊಡುತ್ತಾರೆ. ಫಂಡ್ಸ್ ಇಲ್ಲದಿದ್ದರೆ ಅದನ್ನು ಸಹ ಕೊಡುವುದಿಲ್ಲ. ನಂತರ ರೆಕಾರ್ಡ್ಸ್ ತಯಾರು ಮಾಡಿ, ಅದು ಎ.ಸಿ. ಮತ್ತು ಡಿ.ಸಿ. ಮುಖಾಂತರ ಹೋಗಿ ಬರುವಷ್ಟರಲ್ಲಿ ಗುಡಿಸಲು ಕಳೆದುಕೊಂಡವರು ಊರು ಬಿಟ್ಟು ಹೊರಟು ಹೋಗಿರುತ್ತಾರೆ. ಮನೆಯನ್ನು ಕಳೆದುಕೊಂಡವರಿಗೆ ಅಲ್ಪಸ್ವಲ್ಪವಾಗಿ ಹಣ ಸಿಗುತ್ತದೆ..

10.05 ಎ.ಎಂ.

ಜೊತೆಗೆ ಇದು ಹಳೆಯ ರೇಟು, ಇದೊಂದು ಹಳೆಯ ಪದ್ಧತಿ. ಜೊತೆಗೆ ಅಲ್ಲಿ ನಾಟ ಕೊಡಬೇಕಾದರೆ ಮತ್ತೊಂದು ಕೂಡ ಹಳೆಯ ರೇಟು ಆಗಿದೆ. ಈಗ ಟಿಂಬರ್ ರೇಟು ಕೂಡ ಬಹಳ ವ್ಯತ್ಯಾಸವಾಗಿದೆ. ಅದನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಆ ಒಂದು ಲಾ ಚೇಂಜ್ ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡುತ್ತೇವೆ. ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕಾಗುತ್ತದೆ ಎನ್ನುವ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಅದರ ಬಗ್ಗೆ ನಾನು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರೊ. ಎಂ.ಡಿ. ನಂಜುಂಡ ಸ್ವಾಮಿ : ಮನೆಗಳು ಸುಟ್ಟ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಿದ್ದರು. ನಾನು ಈ ಹಿಂದೆಯೇ ಒಂದು ವಿಚಾರವನ್ನು ಹೇಳಿದೆ. ಸರ್ಕಾರಿ ಆನೆಗಳ ತುಳಿತಕ್ಕೆ ಸಿಕ್ಕಿ ಸತ್ತವರಿಗೆ 5 ಸಾವಿರ ರೂಪಾಯಿ ಕೊಡುತ್ತಿದ್ದಾರೆಂದು ಹೇಳಿದ್ದೆ. ನಿಮ ಸರ್ಕಾರಿ ಆನೆ. ಅವೂ ನಿಮ್ಮದು ಅಲ್ಲ ಎಂದು ಹೇಳಿದರೆ ನಾವು ಗುಂಡು ಹಾಕುತ್ತೇವೆ. ನಿಮ್ಮ ಆನೆಗಳು ತೆಗೆದುಕೊಂಡು ಹೋಗಿ ಬೇರೆ ಕಡೆ ಬಿಡಿ ಅಂದರೆ ನಿಮ್ಮ ಅರಣ್ಯ ಅಧಿಕಾರಿಗಳು ಬಿಡುವುದಿಲ್ಲ. ಸತ್ತರೆ ನಾವು 5 ಸಾವಿರ ಕೊಡುತ್ತೇವಲ್ಲ ಎಂದು ಅಧಿಕಾರಿಗಳು ಮಾತನಾಡುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಗುಂಡು ಹಾಕುತ್ತೇವೆ ಅಂದರೆ ಈಗ ಬೇರೆ ಅರ್ಥವಾಗುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಆ ಕಾರಣದಿಂದ, ಈ ಕಾಂಪನ್ಸೇಷನ್ ವಿಚಾರ ಏನಿದೆ, ಅದನ್ನು ಸ್ವಲ್ಪ ಈ ಕಾಲಕ್ಕೆ ತಕ್ಕ ಹಾಗೆ ಸುಧಾರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಇದು ಏತಕ್ಕೆ ಹೇಳುತ್ತಿದ್ದೇನೆಂದರೆ, ಸರ್ಕಾರಿ ಆನೆ ಎಂದು ಉದ್ದೇಶಪೂರ್ವಕವಾಗಿ ಹೇಳಿದ್ದು, ನಮ್ಮ ಹಳ್ಳಿಗಾಡಿನಲ್ಲಿರುವ ರೈತರಿಗೆ ನ್ಯಾಯಾಲಯಕ್ಕೆ ಹೋಗಿ ಪರಿಹಾರ ಪಡೆಯುವಂತಹ ಶಕ್ತಿ ಇಲ್ಲ. ಬೇರೆ ದೇಶದಲ್ಲಿ ಆಗಿದ್ದರೆ, ಲಕ್ಷಾಂತರ ರೂಪಾಯಿ ನಿಮ್ಮಿಂದ ವಸೂಲು ಮಾಡುತ್ತಿದ್ದರು.

ಶ್ರೀ ಎಸ್. ಬಂಗಾರಪ್ಪ : ಬೇರೆ ದೇಶದಲ್ಲಿ ಕೊಡತಕ್ಕಂಥ ಶಕ್ತಿ ಇದೆ, ಅವರು ವಸೂಲು ಮಾಡತಕ್ಕ ಶಕ್ತಿ ಇದೆ; ಅವರು ವಸೂಲು ಮಾಡಿಕೊಳ್ಳುತ್ತಾರೆ. ನಮ್ಮಲ್ಲಿ ಆ ಪರಿಸ್ಥಿತಿ ಇಲ್ಲ. ಆದರೂ ಕೂಡ ನಮ್ಮ ಸರ್ಕಾರದ ಕಾಡಿನ ಆನೆಗಳು ಜನರನ್ನು ತುಳಿಯುತ್ತವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇನ್ನು ಖಾಸಗಿ ಆನೆಗಳು, ಏನಾದರೂ ತುಳಿದರೆ, ಅದನ್ನು ಸಾಕಿದವರು ಕಾಂಪನ್ಸೇಷನ್ ಕೊಟ್ಟುಕೊಳ್ಳುತ್ತಾರೆ. ಮಾನ್ಯ ಸದಸ್ಯರ ಸಲಹೆ ಯೋಗ್ಯವಾದುದು. ಕಾಂಪನ್ಸೇಷನ್ ಜಾಸ್ತಿ ಕೊಡಲಿಕ್ಕೆ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ನಿಜವಾಗಿ ಹೇಳಬೇಕಾದರೆ ಅದು ಹಳೆಯ ರೇಟು. ಅದರ ಬಗ್ಗೆ ಆಮೂಲಾಗ್ರವಾಗಿ ಪರೀಶೀಲನೆ ಮಾಡಬೇಕೆಂದು ನನ್ನ ಭಾವನೆ ಇದೆ. ಬೆಂಕಿ ಒಂದೇ ಅಲ್ಲ, ಆನೆ ತುಳಿಯುಂತಾದ್ದು ಒಂದೇ ಅಲ್ಲ. ನಾಳೆ ಮತ್ತೊಂದು ಬೇರೆ ಕಾಂಪನ್ಸೇಷನ್ ಆದರೂ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎಂ.ಪಿ. ವೆಂಕಟೇಶ್ : ಈಗ ಆನೆಗಳು ಹತ್ತು ಸಾವಿರ ರೂಪಾಯಿಗಳ ಬೆಳೆ ನಾಶ ಮಾಡಿದರೂ ಸಹ 300 ರೂ.ಗಳ ಪರಿಹಾರ ಸಿಗುತ್ತದೆ. ಇದನ್ನು ಸಹ ಜಾಸ್ತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಸಿ.ಓ.ಡಿ. ತನಿಖೆಗಳು

1332 – ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ), ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ರಾಜ್ಯದ ಸಿ.ಓ.ಡಿ.ಯಿಂದ ತನಿಖೆ ಮಾಡಲ್ಪಟ್ಟ ಪ್ರಕರಣಗಳ ಸಂಖ್ಯೆ ಎಷ್ಟು. ಈ ಪ್ರಕರಣಗಳು ಯಾವುವು?

ಆ) ಈ ವಿಭಾಗದಿಂದ ತನಿಖೆ ಮಾಡಲ್ಪಟ್ಟ ಎಷ್ಟು ಪ್ರಕರಣಗಳು ಸಾಬೀತಾಗಿವೆ?

ಇ) ಈ ವಿಭಾಗವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಆಧುನೀಕರಿಸಿ ಬಲಪಡಿಸುವ ಕಾರ್ಯಕ್ರಮವನ್ನೇನಾದರೂ ಸರ್ಕಾರ ರೂಪಿಸಿದೆಯೇ?

ಈ) ರೂಪಿಸಿದ್ದಲ್ಲಿ ಆ ಕಾರ್ಯಕ್ರಮಗಳು ಯಾವುವು?

ಉ) ಇದಕ್ಕಾಗಿ ವೆಚ್ಚ ಮಾಡಲು ಉದ್ದೇಶಿಸಿರುವ ಹಣವೆಷ್ಟು?

ಶ್ರೀ ಧರ್ಮಸಿಂಗ್, (ಗೃಹಮಂತ್ರಿಗಳು)

ಅ) 686

ತನಿಖೆ ಮಾಡಲಾದ ಪ್ರಕರಣಗಳು ಈ ಕೆಳಗಿನಂತಿವೆ :

1.	ಖೋಟಾನೋಟು ಮತ್ತು ಆಯುಧ ಕಾನೂನಿನ ಅಪರಾಧಗಳು	300
2.	ವಂಚನೆ ಪ್ರಕರಣಗಳು	126
3.	ವಿಶೇಷ ವಿಚಾರಣೆ ಪ್ರಕರಣಗಳು	27